ಕರ್ನಾಟಕ ಸರ್ಕಾರ

**ಜನವರಿ 3 , 2017**

**ಸಹಕಾರ ಮತ್ತು ಸಕ್ಕರೆ ಸಚಿವ ಹೆಚ್. ಎಸ್. ಮಹದೇವ ಪ್ರಸಾದ್ ನಿಧನ :**
**ಮುಖ್ಯಮಂತ್ರಿ ದಿಗ್ಭ್ರಮೆ, ರಾಜ್ಯದ ಎಲ್ಲಾ ಶಾಲಾ–ಕಾಲೇಜುಗಳೂ ಹಾಗೂ**
**ಸರ್ಕಾರಿ ಕಚೇರಿಗಳಿಗೆ ಒಂದು ದಿನದ ರಜಾ ಘೋಷಣೆ,**
**ರಾಜ್ಯಾದ್ಯಂತ ಮೂರು–ದಿನಗಳ ಶೋಕಾಚರಣೆ ಪ್ರಕಟಣೆ**

**ಬೆಂಗಳೂರು, ಜನವರಿ 3 :**

ಸಹಕಾರ ಮತ್ತು ಸಕ್ಕರೆ ಸಚಿವ ಹೆಚ್. ಎಸ್. ಮಹದೇವ ಪ್ರಸಾದ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.

ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲಿ ಮಾಧ್ಯಮದವರ ಜೊತೆ ಮಾತನಾಡುತ್ತಿದ್ದ ಸಿದ್ದರಾಮಯ್ಯ ಅವರು ನನಗೆ ಅತ್ಯಂತ ಆಪ್ತಲ್ಲೊಬ್ಬರಾಗಿದ್ದ ಮಹದೇವ ಪ್ರಸಾದ್ ಅವರು ಅಜಾತ ಶತ್ರು, ಮಿತಭಾಷಿ ಹಾಗೂ ಸಜ್ಜನರಾಜಕಾರಣಿಯಾಗಿದ್ದರು. ಅವರಲ್ಲಿ ಕೋಪ ಎಂಬುದನ್ನು ನಾನು ಎಂದೂ ಕಂಡೇ ಇರಲಿಲ್ಲ.

ಚಿಕ್ಕಮಗಳೂರು ಹೊರ ವಲಯದ ಸೆರಾಯ್ ರೆಸಾರ್ಟ್‌ನಲ್ಲಿ ಸವಿನಿದ್ರೆಯಲ್ಲಿದ್ದಾಗಲೇ ಹೃದಯಾಘಾತವಾಗಿ ಚಿರನಿದ್ರೆಗೆ ಜಾರಿದರು ಎಂಬ ಆಘಾತಕರ ಸುದ್ದಿ ನನ್ನಲ್ಲಿ ದುಃಖವನ್ನು ಇಮ್ಮಡಿಗೊಳಿಸಿದೆ. ಹೊಸ ವರ್ಷಾಚರಣೆಯಲ್ಲಿ ನಾವೆಲ್ಲರೂ ಭಾಗಿಯಾಗಿದ್ದೆವು ಇಂದು ಮಹದೇವ ಪ್ರಸಾದ್ ನಮ್ಮೊಂದಿಗಿಲ್ಲ. ಎಂಬುದು ನಂಬಲಾಗುತ್ತಿಲ್ಲ. ಬದುಕು ಎಷ್ಟು ಅನಿಶ್ಚಿತ ಎಂದು ಸಿದ್ದರಾಮಯ್ಯ ಅವರು ಗದ್ಗದಿತರಾಗಿ ನುಡಿದರು.

ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಿಂದ ಐದು ಬಾರಿ ರಾಜ್ಯ ವಿಧಾನ ಸಭೆಯನ್ನು ಪ್ರವೇಶಿಸಿದ್ದ ಮಹದೇವ ಪ್ರಸಾದ್ ಅವರು ಈ ಹಿಂದೆ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಖಾತೆಗಳನ್ನೂ ಸಮರ್ಥವಾಗಿ ನಿರ್ವಹಿಸಿದ್ದರು.

ಅಂತೆಯೇ, ತಮ್ಮ ಸರ್ಕಾರದಲ್ಲೂ ಸಹಕಾರ ಮತ್ತು ಸಕ್ಕರೆ ಖಾತೆಯನ್ನು ಕ್ರಿಯಾಶೀಲರಾಗಿ ಹಾಗೂ ಸ್ಪಂದನಾಶೀಲರಾಗಿ ನಿರ್ವಹಿಸಿದ ಖ್ಯಾತಿ ಅವರದ್ದಾಗಿತ್ತು. ಯಾವುದೇ ಕಪ್ಪುಚುಕ್ಕಿ ಇಲ್ಲದ ಕಳಂಕ–ರಹಿತ ರಾಜಕಾರಣಿಯಾಗಿದ್ದ ಮಹದೇವ ಪ್ರಸಾದ್ ಅವರು ಶಿಸ್ತಿನ ಸಿಪಾಯಿಯಾಗಿದ್ದರು.

ಪಕ್ಷದಲ್ಲಾಗಲೀ ಅಥವಾ ಸರ್ಕಾರದಲ್ಲಾಗಲೀ ತಮಗೆ ವಹಿಸಿದ್ದ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಪಕ್ಷಕ್ಕೆ ಹಾಗೂ ಸರ್ಕಾರಕ್ಕೆ ನೂರಕ್ಕೆ ನೂರರಷ್ಟು ನಿಷ್ಠೆ ಅವರ ವಿಶೇಷವಾಗಿತ್ತು. ಕೇವಲ 58 ವರ್ಷದ ಮಹದೇವ ಪ್ರಸಾದ್ ಅವರು ಐದು ಬಾರಿ ಮಾತ್ರವಲ್ಲ, ಗುಂಡ್ಲುಪೇಟೆಯಲ್ಲಿ ಎಷ್ಟು ಬಾರಿ ಸ್ಪರ್ಧಿಸಿದ್ದರೂ ಗೆಲ್ಲುತ್ತಿದ್ದರು.

ಮಹದೇವ ಪ್ರಸಾದ್ ಅವರ ನಿಧನದಿಂದ ತಮಗೆ ವೈಯುಕ್ತಿಕವಾಗಿ ಮಾತ್ರವಲ್ಲದೆ, ಪಕ್ಷಕ್ಕೆ, ಸರ್ಕಾರಕ್ಕೆ ಹಾಗೂ ರಾಜ್ಯಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಮುಖ್ಯಮಂತ್ರಿ ಬಣ್ಣಿಸಿದ್ದಾರೆ.

ಮಹದೇವ ಪ್ರಸಾದ್ ಅವರ ಆತ್ಮಕ್ಕೆ ಚಿರ ಶಾಂತಿ ದೊರೆಯಲಿ. ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ

**ರಜೆ ಘೋಷಣೆ – ಶೋಕಾಚರಣೆ ಪ್ರಕಟಣೆ**

ಮೃತರ ಗೌರವಾರ್ಥ ಶಾಲಾ–ಕಾಲೇಜುಗಳು ಹಾಗೂ ಸರ್ಕಾರಿ ಕಚೇರಿಗಳಿಗೆ ಒಂದು ದಿನದ ಸಾರ್ವತ್ರಿಕ ರಜೆಯನ್ನು ಘೋಷಿಸಲಾಗಿದೆ. ರಾಜ್ಯಾದ್ಯಂತ ಮೂರು–ದಿನಗಳ ಕಾಲ ಶೋಕಾಚರಣೆ ಪ್ರಕಟಿಸಲಾಗಿದೆ ಎಂದೂ ಮುಖ್ಯಮಂತ್ರಿ ತಿಳಿಸಿದ್ದಾರೆ.

*****************

ಡಿ ಪಿ ಎಂ